ದಿನಾಂಕ: 09.07.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಬಿ ಎಂ ಆರ್ ಸಿ ವಕೀಲರಿಂದಃ**

ನಿಆರ್ –4 ರಲ್ಲಿ ಫ್ರಾಸಾ–5 ಎಂ ಸುಂದರ್ ತಂದೆ ವರದಾಚಲಂ ಎಂದು ಸಾಕ್ಷಿ ನೀಡಿದವರು ನಾನೇ ಎಂದರೆ ನಿಜ. ಸಾಕ್ಷಿಯು ಸಿ ಸಿ ನಂ.169/2013 ರಲ್ಲಿ ನೀಡಿರುವ ಹೇಳಿಕೆಯನ್ನು ತನ್ನ ಹೇಳಿಕೆ ಎಂದು ಒಪ್ಪಿಕೊಂಡಿದ್ದು 2 ನೇ ಎದುರುದಾರರ ಪರ ವಕೀಲರು ಆ ದಾಖಲೆ ಗುರುತಿಸಲು ಕೋರಿಕೊಂಡಿದ್ದು ಆ ದಾಖಲೆಯನ್ನು ನಿಆರ್ – 6 ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು 19.08.2014 ರಲ್ಲಿ ನೀಡಿರುತ್ತೇನೆ ಎಂದರೆ ಸರಿ . ನಾನು ನನ್ನ ಹೇಳಿಕೆಯಲ್ಲಿ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಬಾಬು ಮತ್ತು ಬಾಲ ಸುಂದರ್ ಬೇರೆ ಬೇರೆ ವ್ಯಕ್ತಿಗಳಾಗಿರುವುದರಿಂದ ನಾನು ಕ್ರಿಮಿನಲ್ ಪ್ರಕರಣದಲ್ಲಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಾಲಸುಂದರ್ ಇವರನ್ನು ಊರಿನಲ್ಲಿ ಬಾಬು ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ಅಪಘಾತ ನಡೆದ 2 ವರ್ಷಗಳ ನಂತರ ಹೇಳಿಕೆ ನೀಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಸಮನ್ಸ್ ಬಂದ ನಂತರ ಹೋಗಿ ಹೇಳಿಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು